ಗಳನ್ನು ಬೆಳೆ ಹಾನಿಯಾಗಿದ್ದಕ್ಕೆ ಕೊಟ್ಟಿದ್ದಾರೆಯೇ ಹೊರತು ಬೇರೆ ಇನ್ನಾವುದೇ ಸಂದರ್ಭದಲ್ಲಿ ಕೊಟ್ಟಿಲ್ಲ. ಆದ್ದರಿಂದ ನಾವು ಇದನ್ನು ಹಿಂದಿನ 10 ವರ್ಷಗಳ ಆಧಾರಕ್ಕೆ ಬದಲಾಗಿ ಹಿಂದಿನ ಮೂರು ವರ್ಷಕ್ಕೆ ಇಳಿಸಬೇಕೆಂದು ಅವರನ್ನು ಕೇಳಿಕೊಂಡಿದ್ದೇವೆ. ಆದರೆ ಜನರಲ್ ಕ್ರಾಪ್ ಇನ್ಸೂರೆನ್ಸ್ ಕಂಪನಿಯವರು ಒಪ್ಪಿಕೊಂಡಿಲ್ಲ.

ಶ್ರೀ ಎಂ. ಎಂ ನಾಣಯ್ಯ.— ತಾಲ್ಲೂಕು ಮಟ್ಟದ ಬದಲಾಗಿ ಹೋಬಳಿ ಮಟ್ಟಕ್ಕೆ ಇದನ್ನು ಇಳಿಸುತ್ತೀರಾ ;

ಶ್ರೀ ಬಿ.ಎಲ್. ಗೌಡ.— ಕೇಂದ್ರ ಸರ್ಕಾರಕ್ಕೆ ನಾವು ಇದರ ಬಗ್ಗೆ ಈಗಾಗಲೇ ಸಲಹೆ ಮಾಡಿದ್ದೇವೆ, ಹಳ್ಳಿಯ ಮಟ್ಟಕ್ಕೆ ಇಳಿಸುವುದಕ್ಕೆ ಅವರು ಒಪ್ಪಲಿಲ್ಲ.

ಬಿ.ಕೆ. ಸುಬ್ಬಯ್ಯ.— ಈ ವರ್ಷ ಸಪೆಂಬರ್ ತಿಂಗಳಲ್ಲಿ ಮಳೆ ಆಗದೇ ಹೋದುದರಿಂದ ಎಷ್ಟು ಬೆಳೆಯಾಗಿದೆ, ಎಷ್ಟು ಬೆಳೆಗೆ ಹಾನಿಯಾಗಿದೆ ಎನ್ನುವ ವಿವರವನ್ನು ತಿಳಿಸುತ್ತೀರಾ ?

ಶ್ರೀ ಬಿ. ಎಲ್. ಗೌಡ.— ಆ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ವರಲಕ್ಷ್ಮಿ ಹಾಗೂ ಇತರ ಹತ್ತಿ ಬೆಳೆಗೆ ಸಹಾಯ ಧನ

ಪ್ರಶ್ನೆ : 217 (478) ಶ್ರೀ ಎಫ್. ಎ. ಕೊಪ್ಪದ್ (ರಾಮದುರ್ಗ).— ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ವರಲಕ್ಷ್ಮಿ ಹಾಗೂ ಇತರ ಹತ್ತಿ ಬೆಳೆಗಾಗಿ ಕೊಡುತ್ತಿರುವ 1500 ರೂಪಾಯಿಗಳ ಸಹಾಯಧನವನ್ನು ರಾಮದುರ್ಗ ತಾಲ್ಲೂಕಿನ ಮಲಪ್ರಭಾ ನೀರಾವರಿ ಪ್ರದೇಶದಲ್ಲಿನ ರೈತರಿಗೆ ಕೊಡುತ್ತಿರುವುದು ನಿಜವೇ ;

ಆ) ಹಾಗಿದ್ದಲ್ಲಿ ಯಾತ ನೀರಾವರಿ ಯೋಜನೆ ಅಥವಾ ಸಣ್ಣ ನೀರಾವರಿ ಯೋಜನೆಯಲ್ಲಿ ರೈತರಿಗೆ ಕೊಡುತ್ತಿರುವುದು ನಿಜವೇ ;

ಇ) ಸದರಿ ರೈತರಿಗೂ ಈ ಸಹಾಯಧನ ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಉತ್ತರ : ಶ್ರೀ ಬಿ. ಎಲ್. ಗೌಡ (ಕೃಷಿ ಸಚಿವರು).— ಅ) ಹೌದು. ಆ) ಹೌದು.

ಇ) ಉದ್ಭವಿಸುವುದಿಲ್ಲ.

ಶ್ರೀ ಎಫ್. ಎ. ಕೊಪ್ಪದ್. — ಅಧ್ಯಕ್ಷರೇ, ರಾಮದುರ್ಗ ತಾಲ್ಲೂಕಿನ ಮಲಪ್ರಭಾ ವೀರಾವರಿ ಪ್ರದೇಶದಲ್ಲಿರುವ ಸಣ್ಣ ಸಣ್ಣ ರೈತರಿಗೆ ಸಹಾಯಧನ ಸಿಗುತ್ತಿಲ್ಲ. ಆದುದರಿಂದ ಅವರಿಗೂ ಸಹ ಸಹಾಯಧನವನ್ನು ಕೊಡಿಸಿ ಕೊಡುತ್ತೀರಾ ?

ಶ್ರೀ ಎಸ್. ರೇವಣ್ಣ :— ರಾಜ್ಯ ಕೃಷಿ (ಸಚಿವರು).— ಇದಕ್ಕೆ ಕೆಲವು ನಿಬಂಧನೆಗಳಿವೆ. ಒಟ್ಟಿಗೆ 10-15 ಎಕರೆ ಇರತಕ್ಕಂಥ ಪ್ರದೇಶಗಳವರಿಗೆ ಸಹಾಯವನ್ನು ಕೊಡುತ್ತಿದ್ದಾರೆ.

ಶ್ರೀ ಎಫ್.ಎ. ಕೊಪ್ಪದ್.— 10-15 ಎಕರೆ ಅಲ್ಲ. 40-50 ಎಕರೆ ಇರತಕ್ಕಂಥಾ ಒಣ ಬೇಸಾಯ ಮಾಡತಕ್ಕ ರೈತರಿಗೆ ಈ ಸಹಾಯವನ್ನು ಕೊಟ್ಟಿಲ್ಲ. ಇದರಿಂದ ಅವರಿಗೆ ಬಹಳ ಅನ್ಯಾಯವಾಗಿದೆ.

ಶ್ರೀ ಎಸ್, ರೇವಣ್ಣ.— ಒಣ ಬೇಸಾಯ ಪದ್ಧತಿ ಮಾಡತಕ್ಕವರಿಗೆ ಒಂದು ಎಕರೆಗೆ 800 ರೂಪಾಯಿ ಕೊಡತಕ್ಕ ಪದ್ಧತಿ ಇದೆ. ಇದು ಕಾಡು ಪ್ರದೇಶದಲ್ಲಿರತಕ್ಕವರೆಲ್ಲರಿಗೂ ಅನ್ವಯವಾಗುತ್ತದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.— ಹೋದ ವರ್ಷ ಹತ್ತಿ ಬೆಳೆಗೆ ಎಷ್ಟು ಹಾನಿಯಾಗಿದೆ.

ಶ್ರೀ ಎಸ್. ರೇವಣ್ಣ.— ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಫ್. ಎ. ಕೊಪ್ಪದ್.— ಎಲ್ಲರಿಗೂ ಸಹ ಸಿಕ್ಕುವ ಹಾಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ರೇವಣ್ಣ.— ನೀರಾವರಿ ಪ್ರದೇಶದಲ್ಲಿರತಕ್ಕವರೆಲ್ಲರಿಗೆ ನಿಯಮದ ಪ್ರಕಾರ ಕೊಡುತ್ತೇವೆ.

ಅಧ್ಯಕ್ಷರು :— ಸುಧೀಂದ್ರ ರಾವ್ ಕಸಬೆ.— ಸದಸ್ಯರಿಲ್ಲ.

ಶ್ರೀ ಬಿ. ಎಸ್ ಯಡಿಯೂರಪ್ಪ.— ಸದಸ್ಯರಿಲ್ಲ.

ವಿಷಯ : ಹೊನ್ನಾವರ ತಾಲ್ಲೂಕಿನಲ್ಲಿರುವ ಶಾರದಾಂಬಾ ಪ್ರೌಢ ಶಾಲೆ

ಪ್ರಶ್ನೆ 220 (611) ಶ್ರೀ ಆರ್. ಎನ್. ನಾಯ್ಕ (ಬಟ್ಕಳ್).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹೊನ್ನಾವರ ತಾಲ್ಲೂಕಿನ ಸಂಶಿ ಗ್ರಾಮದ ಶಾರದಾಂಬಾ ಪ್ರೌಢಶಾಲೆಯನ್ನು ಸರ್ಕಾರದವರು ವಹಿಸಿಕೊಳ್ಳುವಂತೆ ಸಾರ್ವಜನಿಕರಿಂದ ಹಾಗೂ ಆ ಭಾಗದ ಶಾಸಕರಿಂದ ಬೇಡಿಕೆಗಳೇನಾದರೂ ಬಂದಿವೆಯೇ ;

ಆ) ಹಾಗಿದ್ದಲ್ಲಿ ಯಾವಾಗ; ಇ) ಆ ಬಗ್ಗೆ ಕೈಗೊಂಡ ಕ್ರಮವೇನು ?

ಉತ್ತರ : ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು). — ಅ) ಬಂದಿದೆ.

ಆ) (1) ಸಾರ್ವಜನಿಕರಿಂದ ದಿನಾಂಕ 28-7-83. (2) ಶಾಸಕರಿಂದ ದಿನಾಂಕ 18-8-1983 ಮತ್ತು ಮುಂದಿನ ತಾರೀಖುಗಳಲ್ಲಿ.

ಇ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಆರ್. ಎನ್ ನಾಯಕ್.— ಮಾನ್ಯ ಅಧ್ಯಕ್ಷರೇ, ಪರಿಶೀಲನೆಯಲ್ಲಿದೆ ಎಂದರೆ ಯಾವ ಹಂತದಲ್ಲಿದೆ ; ಅದು ಆಗುವ ಸಾಧ್ಯತೆ ಏನಾದರೂ ಇದೆಯೇ ; ಅಥವಾ ಮಂತ್ರಿಗಳಿಗೆ ಮನಸ್ಸಿದೆಯೇ ಎನ್ನುವುದರ ಬಗ್ಗೆ ನನಗೆ ಮನವರಿಕೆ ಮಾಡಿಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.— ಮಾನ್ಯ ಅಧ್ಯಕ್ಷರೇ, ಸರಕಾರವೇ ವಹಿಸಕೊಳ್ಳಿ ಎಂದು ಬರೆದಿದ್ದಾರೆ. ಇವರಿಗೆ ಎಷ್ಟು ಆಸ್ತಿ ಇದೆ, ಎಷ್ಟು ಶಾಲಾ ಕಟ್ಟಡಗಳಾಗಿವೆ, ಉಪಾಧ್ಯಾಯರು ಎಷ್ಟು ಜನ ಇದ್ದಾರೆ, ಸರಕಾರಕ್ಕೆ ಭಾರ ಎಷ್ಟು ಹೆಚ್ಚಾಗುತ್ತದೆ, ಎಂಬ ವಿವರಗಳನ್ನು ತರಿಸುತ್ತಿದ್ದೇನೆ. ಅದು ಬಂದ ಮೇಲೆ ಸರಕಾರ ಇದನ್ನು ನಡೆಸುವುದಕ್ಕೆ ಸಾಧ್ಯವೇ ಇಲ್ಲವೇ ಎಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ಎನ್ ನಾಯಕ್.—ಶಾಲೆಗಳ ಆಸ್ತಿ ಎಷ್ಟಿದೆ ಎಂಬುದನ್ನು ಮ್ಯಾನೇಜ್‌ಮೆಂಟ್‌ನವರು ಬರೆದು ಈಗಾಗಲೇ ಕಳುಹಿಸಿಕೊಟ್ಟು ಬಿಟ್ಟಿದ್ದಾರೆ. ಸರಕಾರ ಆಲ್ಲಿಯ ಟೀಚರ್ಸ್‌ಗಳಿಗೆ ಪಗಾರ ಈಗಾಗಲೇ ಕೊಡುತ್ತಿದೆ. ಆದುದರಿಂದ ಸರಕಾರಕ್ಕೆ ಭಾರ ಬರುವುದಿಲ್ಲ. ಮಂತ್ರಿಗಳು ಇದರ ಬಗ್ಗೆ ತಿಳಿದುಕೊಳ್ಳಬೇಕು ಮತ್ತು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

3. ಸಿನೇ ಪಟ್ಟಿಯಿಂದ ಮುಂದೂಡಲಾದ ಪ್ರಶ್ನೆ

ಶ್ರೀ ಬಿ. ರಾಚಯ್ಯ :— ವಿವರಗಳನ್ನು ತರಿಸಿ ತೀರ್ಮಾನ ಮಾಡಬೇಕಾಗಿದೆ.

ವಿಷಯ :— ಬೆಂಗಳೂರು ಡೈರಿ ಹಾಲಿನ ದರದ ಬಗ್ಗೆ.

ಪ್ರಶ್ನೆ : 19 (48) ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).— ಮಾನ್ಯ ಪಶು ಸಂಗೋಪನೆ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅನುಬಂಧ

1980–81; 1981–82 ಮತ್ತು 1982–83 ಸಾಲಿನ ಬೆಂಗಳೂರು ಡೈರಿಯಲ್ಲಿ ಮಾರಾಟವಾದ

ಕ್ರಮ ಸಂಖ್ಯೆ	ವಿವರ	1980–81 ಪ್ರಮಾಣ	ಮೌಲ್ಯ
1.	ಹಾಲು ಲೀಟರ್‌ಗಳಲ್ಲಿ	6,91,39,946·13	16,,0,08,575·52
2.	ಮೊಸರು – ,, –	9,63,700·50	25,79,514·25
3.	ಬೆಣ್ಣೆ ಕೆ.ಜಿ.ಗಳಲ್ಲಿ	1,36,158·80	25,86,146·70
4.	ತುಪ್ಪ – ,, –	7,07,129·50	179,44,808·94
5.	ಪೇಡ – ,, –	3,915·775	1,06,793·60
6.	ಲಸ್ಸಿ ಲೀಟರ್‌ಗಳಲ್ಲಿ	8,527·00	21,718·10
7.	ಸ್ಕಿಂ ಹಾಲು –,,–	21,467·40	29,725·15
8.	ಬೆಣ್ಣೆ-ಎಣ್ಣೆ ಕೆಜಿ.ಗಳಲ್ಲಿ		
9.	ಕೆನೆ	5,156·35	56,510·48
10.	ಎಸ್. ಪಿ. ಎಂ– ,, –	77,726·65	11,06,977·41
11.	ಕೇಸಿನ್ – ,, –	1,17,125·50	11,19,753·71
12.	ಸ್ಕಿಂಹಾಲಿನಪುಡಿ-,,-	350·00	7,550·00
13.	ಆರ್.ಎತ್ ಎಂ. ಲೀಟರ್	3,52,723·00	4,41,106·25
14.	ಡಿ.ಟಿ.ಎಂ ಲೀಟರ್	4,07,200·50	5,29,360·00
			18,95,38,540·81